# ಹೆಚ್ಚುವರಿ ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಮುಧೋಳ

**ಸಿ.ಸಿ ನಂ.288/2023**

1) **ಕರ್ನಾಟಕ ಸರ್ಕಾರ, ಅಬಕಾರಿ ಠಾಣೆ**

... ಫಿರ್ಯಾದಿ.

**- ವಿರುದ್ಧ -**

1) **ಮಂಜುನಾಥ ಅವಪ್ಪ ನಾಯಕ**

..... ಆರೋಪಿ

= = = = =

**ಉಪಸ್ಥಿತರುಃ ಶ್ರೀಮತಿ. ಗೀತಾಮಣಿ**

B.A. L.L.B

**C/c ಹೆಚ್ಚುವರಿ, ಹಿರಿಯ ಜೆ.ಎಂ.ಎಫ್.ಸಿ. ನ್ಯಾಯಾಧೀಶರು,**

**ಮುಧೋಳ.**

**: : ದೋಷಾರೋಪಣೆ: :**

ದಿನಾಂಕ 01.09.2022 ರಂದು ಬೆಳಗಿನ ಜಾವ ಚಿತ್ರಬಾನುಕೋಟೆ ಇಂದ ಚಿಕ್ಕೂರ ತಾಂಡಾ ನಂ.1 ಹೋಗುವ ರಸ್ತೆಯಲ್ಲಿನ ಚಿಕ್ಕೂರ ತಾಂಡಾ ನಂ.1 ರಿಂದ ಸುಮಾರು 100 ಮೀಟರ ಅಂತರದಲ್ಲಿ ಇರುವ ಸೇತುವ ಹತ್ತಿರ ಆರೋಪಿಯವರಾದ ನೀವು ಚಿಕ್ಕೂರ ತಾಂಡಾ-1 ಕಡೆಯಿಂದ ಕೆ.ಎ.48/ಆರ್/8512 ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದಾಗ, ಗಸ್ತಿನಲ್ಲಿ ಇದ್ದ ಪೊಲೀಸರು ತಡೆಯಲು ಪ್ರಯತ್ನಿಸಿದಾಗ ಗಾಬರಿಯಿಂದ ಕಬ್ಬಿನ ಗದ್ದೆಯಲ್ಲಿ ಓಡಿ ಪರಾಗಿಯಾಗಿದ್ದು, ನಿಮ್ಮ ವಾಹನದ ಬಳಿ ಬಿದ್ದ ಕಪ್ಪು ಬಣ್ಣದ ಪ್ಲಾಸ್ಟಿಕ ಪರಿಶೀಲನೆ ಮಾಡಿದಾಗ 100 ಎಮ್.ಎಲ್. ಅಳತೆಯ 20 ಕಳ್ಳಭಟ್ಟಿ ಸಾರಾಯಿ ಪಾಕೆಟಗಳು ಕಂಡು ಬಂದವು. ಆ ಮೂಲಕ ಅಪರಾದ ಕಲಂ.11, 13, 15, 32(1), 38(A) ಕರ್ನಾಟಕ ಅಬಕಾರಿ ಕಾಯ್ದೆ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲ್ಕಾಣಿಸಿದ ದೋಷಾರೋಪಣೆಗಾಗಿ ನಿಮ್ಮ ಮೇಲೆ ವಿಚಾರಣೆಯಾಗಲು ಆದೇಶಿಸುತ್ತೇನೆ.

ಪ್ರಶ್ನೇಃ 1) - ಈ ಆಪಾದನೆಯನ್ನು ಓದಿ ಹೇಳಿದ್ದು ತಿಳಿಯಿತೋ ಹೇಗೆ ?

ಉತ್ತರಃ-

ಪ್ರಶ್ನೇಃ 2) - ಆಪಾದನೆ ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ-

ಸ್ಥಳ ಃ ಮುಧೋಳ

ದಿನಾಂಕ ಃ 08-09-2023

ಓ ಹೇ ಕೇ ಸರಿ ಇದೆ.

Sd/-

C/c ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಮುಧೋಳ.